ದಿನಾಂಕ 11-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಎಸ್ ವಿ ಎಂ  ವಕೀಲರಿಂದಃ**

1. ನಾನು ಕೆಲವರಕೊಪ್ಪದ ಗ್ರಾಮದ ಖಾಯಂ ನಿವಾಸಿ. ಈ ದಾವೆಯನ್ನು ರುದ್ರಪ್ಪ ಕೋಡಿಹಳ್ಳಿ ರವರು ನನ್ನ ಮತ್ತು ಇತರ ಪ್ರತಿವಾದಿಗಳ ವಿರುದ್ದ ಸ ನಂಃ 111 ರ ಜಮೀನಿನಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಖರೀದಿ ಮಾಡಿರುವುದಾಗಿ ಸಲ್ಲಿಸಿರುತ್ತಾರೆ. ಸ ನಂಃ 111/ಬ ಜಮೀನು ಒಟ್ಟು ವಿಸ್ತೀರ್ಣ 39 ಎಕರೆ ಇತ್ತು. ಅದರ ಮೂಲ ವಿಸ್ತೀರ್ಣ 84 ಎಕರೆ 12 ಗುಂಟೆ ಇತ್ತು ಎಂದರೆ ಇರಬಹುದು. ಸದರಿ 84 ಎಕರೆ 12 ಗುಂಟೆ ಜಮೀನಿನ ಪೈಕಿ ಸುಮಾರು 45 ಗುಂಟೆ ಖರಾಬು ಕ್ಷೇತ್ರ ಇದೆ ಎಂದರೆ ಸರಿ. ಸದರಿ ಒಟ್ಟು ವಿಸ್ತೀರ್ಣದ ಪೈಕಿ 39 ಎಕರೆ 12 ಗುಂಟೆ ಜಮೀನು ಮಾತ್ರ ಸಾಗುವಳಿ ಕ್ಷೇತ್ರ ಎಂದರೆ ಸರಿಯಲ್ಲ.

2. ಸದರಿ 39 ಎಕರೆ 12 ಗುಂಟೆ ಪೈಕಿ 5 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮಂಜೂರಿ ಕೋರಿ ಸಿದ್ದಪ್ಪ ತಂದೆ ರುದ್ರಪ್ಪ ಮತ್ತಿಹಳ್ಳಿ ರವರು ಭೂ ನ್ಯಾಯ ಮಂಡಳಿಗೆ ಫಾರಂ ನಂಃ 7 ರ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಅದರಂತೆ ಭೂ ನ್ಯಾಯ ಮಂಡಳಿಯು ಸದರಿ 5 ಎಕರೆ ಜಮೀನನ್ನು ಆತನಿಗೆ ಮಂಜೂರು ಮಾಡಿರುತ್ತದೆ ಎಂದರೆ ಸರಿ. ಅದೇ ರೀತಿ 2 ಎಕರೆ ಜಮೀನನ್ನು ಮಂಜೂರಿ ಕೋರಿ ಭೂ ನ್ಯಾಯ ಮಂಡಳಿಗೆ ಗೌರವ್ವ ಕೋಂ ಹಕ್ಲಪ್ಪ ಕೋಡಿಹಳ್ಳಿ ಅರ್ಜಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಸದರಿ ಗೌರವ್ವ ಕೋಡಿಹಳ್ಳಿ ವಾದಿಯ ಅಜ್ಜಿ ಎಂದರೆ ಸರಿ.

3. ನೀಲಪ್ಪ ಕುರಡೂರು ಎಂಬುವ ವ್ಯಕ್ತಿ ಸದರಿ ಒಟ್ಟು ಜಮೀನಿನ ಪೈಕಿ ಮಂಜೂರಾತಿ ಕೋರಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ಆತನು ಸಲ್ಲಿಸಿದ್ದ

ಅರ್ಜಿಯನ್ನು ಅವನು ರೈತನು ಇರುವುದಿಲ್ಲ ಎಂದು ಹೇಳಿ ಭೂ ನ್ಯಾಯ ಮಂಡಳಿಯು ದಿಃ 14-12-1981 ರಂದು ವಜಾಗೊಳಿಸಿತ್ತು ಎಂದರೆ ಗೊತ್ತಿಲ್ಲ. ಸಾಗುವಳಿ ಕ್ಷೇತ್ರವಾದ 39 ಎಕರೆ 12 ಗುಂಟೆ ಜಮೀನಿನ ಪೈಕಿ 7 ಎಕರೆ 10 ಗುಂಟೆ ಕ್ಷೇತ್ರವನ್ನು ಮಾತ್ರ ಭೂ ನ್ಯಾಯ ಮಂಡಳಿಯು ಸಾಗುವಳಿ ಉದ್ದೇಶಕ್ಕೆ ಸಿದ್ದಪ್ಪ ಮತ್ತಿಹಳ್ಳಿ ಮತ್ತು ಗೌರವ್ವ ಹಕ್ಲಪ್ಪ ರವರಿಗೆ ಕ್ರಮವಾಗಿ ಮಂಜುರು ಮಾಡಿತ್ತು ಎಂದರೆ ಗೊತ್ತಿಲ್ಲ. ಸ ನಂಃ 111/ಬ ಜಮೀನಿನ ಒಟ್ಟು ಕ್ಷೇತ್ರವಾದ 84 ಎಕರೆ 12 ಗುಂಟೆ ಇನಾಂ ಜಮೀನು ಎಂದರೆ ಸರಿ. ಹನುಮಂತ ತಿಮ್ಮಾಜಿ ಎಂಬುವವರು ಸದರಿ ಜಮೀನಿನ ಪೂರ್ವ ಮಾಲೀಕರು ಎಂದರೆ ಸರಿ. ಹನುಮಂತಪ್ಪ ತಿಮ್ಮಾಜಿ ರವರು ಮರಣ ಹೊಂದಿದ ನಂತರ ವಾರಸಾ ನಾತೆಯಿಂದ ಆತನ ಮಗನಾದ ರಾಮರಾವ್ ಹನುಮಂತರಾವ್ ರವರಿಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ರಾಮರಾವ್ ಹನುಮಂತರಾವ್ ರವರು 1951 ರಲ್ಲಿ ಮರಣ ಹೊಂದುವವರೆಗೂ ಸದರಿ 84 ಎಕರೆ 12 ಗುಂಟೆ ಜಮೀನನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ರಾಮರಾವ್ ರವರು ಮರಣ ಹೊಂದಿದ ನಂತರ



ಸದರಿ ಜಮೀನು ವಾರಸಾ ಪ್ರಕಾರ ಆತನ ಹೆಂಡತಿ ಜಾನಕಿಬಾಯಿಗೆ ಬಂದಿರುತ್ತದೆ ಎಂದರೆ ಸರಿ. ಅದರಂತೆ ಡ ಸಂಃ 188 ಮಂಜೂರಿ ಆಗಿರುತ್ತದೆ ಎಂದರೆ ಸರಿ. ಸದರಿ ಜಾನಕಿಬಾಯಿ ಮರಣ ಹೊಂದಿದ ನಂತರ 84 ಎಕರೆ 12 ಗುಂಟೆ ಜಮೀನು ಗೋಪಾಲಕೃಷ್ಣ ತಂದೆ ರಾಮರಾವ್ ದೇಸಾಯಿ ರವರ ಹಿಸ್ಸೇಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

4. ಸ ನಂಃ 111/ಬ ಜಮೀನಿನ ಪಹಣಿ ಪತ್ರಿಕೆಗಳನ್ನು ನೋಡಿರುವುದಿಲ್ಲ. ಸದರಿ ಜಮೀನಿನ ಒಟ್ಟು ಕ್ಷೇತ್ರವು ಕಾಲ ಕಾಲಕ್ಕೆ ಯಾರ ಹೆಸರುಗಳಲ್ಲಿ ಯಾವ ಡ ಸಂಖ್ಯೆ ನಮೂದಿನ ಪ್ರಕಾರ ಬದಲಾಗುತ್ತಾ ಬಂದಿರುತ್ತದೆ ಎಂಬುದನ್ನು ನಾನು ನೋಡಿರುವುದಿಲ್ಲ. ಸದರಿ ಕಂದಾಯ ದಾಖಲೆಗಳನ್ನು ನೋಡಿ ತಿಳಿದುಕೊಳ್ಳಲು ನನಗೆ ಯಾವುದೇ ತೊಂದರೆ

ಇರಲಿಲ್ಲ. 84 ಎಕರೆ 12 ಗುಂಟೆ ಜಮೀನು ಗುಡ್ಡಗಾಡು ಪ್ರದೇಶ ಎಂದರೆ ಸರಿ. ಸದರಿ ಜಮೀನಿನಲ್ಲಿ ಗೋವಿನ ಜೋಳ ಮತ್ತುಹತ್ತಿ ಬೆಳೆಗಳನ್ನು ಮಾತ್ರ ಬೆಳೆಯಬಹುದು ಎಂದರೆ ಸಾಕ್ಷಿಯು ಯಾವುದೇ ರೀತಿಯ ಬೆಳೆಗಳನ್ನು ಬೆಳೆಯಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ಗುಡ್ಡಗಾಡು ಪ್ರದೇಶ ಇರುವುದರಿಂದ ವ್ಯವಸಾಯ ಮಾಡಲು ಆಗುವುದಿಲ್ಲ. ಸ ನಂಃ 111/ಬ ಜಮೀನಿನಲ್ಲಿ ಸಾಗುವಳಿ ಕ್ಷೇತ್ರ ಇದ್ದ 39 ಎಕರೆ 12 ಗುಂಟೆ ಜಮೀನಿನ ಪೈಕಿ ಸಿದ್ದಪ್ಪ ರವರಿಗೆ ಮಂಜೂರಾದ 5 ಎಕರೆ ಮತ್ತು ಗೌರವ್ವ ರವರಿಗೆ ಮಂಜೂರಾದ 2 ಎಕರೆ ಜಮೀನನ್ನು ಹೊರತುಪಡಿಸಿ ಹಾಗೂ ಕೆಲವೊಂದು ಕ್ಷೇತ್ರವನ್ನು ಮಾರಾಟ ಮಾಡಿದ ಜಮೀನನ್ನು ಬಿಟ್ಟು ಉಳಿಕೆ ಜಮೀನನ್ನು ದೇಸಾಯಿ ಕುಟುಂಬದವರು ವಹಿವಾಟು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅದರ ಬಗ್ಗೆ ನನಗಾಗಲಿ, ವಾದಿಗಾಗಲೀ ಅಥವಾ ಉಳಿದ ಪ್ರತಿವಾದಿಗಳಿಗಾಗಲೀ ಗೊತ್ತಿಲ್ಲ ಎಂದು ನುಡಿಯುತ್ತಾರೆ.

-9-

5. 5 ಎಕರೆ ಕ್ಷೇತ್ರವನ್ನು ಸಿದ್ದಪ್ಪ ಮತ್ತಿಹಳ್ಳಿ ಮತ್ತು 2 ಎಕರೆ ಕ್ಷೇತ್ರವನ್ನು ವಾದಿಯು ವಹಿವಾಟು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು ಅವು ಗುಡ್ಡಗಾಡು ಪ್ರದೇಶ ಇರುವುದರಿಂದ ವಹಿವಾಟು ಮಾಡುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು 2 ಎಕರೆ ಜಮೀನನ್ನು ಮತ್ತು ಸಿದ್ದಪ್ಪ ಮತ್ತಿಹಳ್ಳಿ 5 ಎಕರೆ ಜಮೀನನ್ನು ವಹಿವಾಟು ಮಾಡುತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ